ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 06-02-2024 ರಂದು ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಕೆ ಆರ್ ಡಿ ನ್ಯಾಯವಾದಿರವರಿಂದಃ

ನಾನು ಸಲ್ಲಿಸುತ್ತಿರುವ ಪ್ರಮಾಣ ಪತ್ರದಲ್ಲಿರುವ ಸಂಗತಿಗಳು ನನಗೆ ಗೊತ್ತಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಮತ್ತು ಪ್ರಮಾಣಪತ್ರದಲ್ಲಿರುವ ವಿಷಯಗಳು ನಾನೇ ಹೇಳಿ ಬರೆಸಿರುತ್ತೇನೆ. ಈ ಪ್ರಮಾಣ ಪತ್ರವನ್ನು ಮುಖ್ಯ ವಿಚಾರಣೆಯ ಭಾಗವಾಗಿ ಪರಿಗಣಿಸಲು ಹಾಜರುಪಡಿಸಿರುತ್ತೇನೆ.

ಇದೇ ದಾವೆ (ಅಸಲು ದಾವೆ ಸಂಖ್ಯೆ 42/2013) ರಲ್ಲಿ ದಿಃ 05-11-2018 ರಂದು ಆದ ತೀರ್ಪು ಮತ್ತು ಡಿಕ್ರಿಯ ದೃಢಿಕೃತನ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-11 ಎಂದು, ಸದರಿ ದಾವೆಯ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿದ್ದು, ಸದರಿ ಮೇಲ್ಮನವಿ ಆರ್ ಎ ಸಂಖ್ಯೆ 43/2018 ಡಿಕ್ರಿಯ ದೃಢಿಕೃತನ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-12 ಎಂದು, ದಿಃ 23-09-2006 ರಂದು ಶ್ರೀ ಸೈರೊಬಾ ಆಪಾ ಗುರವ ಇವರು ನನ್ನ ಹೆಸರಿಗೆ ಬರೆದುಕೊಟ್ಟ ನೊಂದಾಯಿತ ಭಕ್ಷಿಸು ಪತ್ರದ ಮೂಲಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-13 ಎಂದು ಗುರುತಿಸಲಾಯಿತು. ಸಾಕ್ಷಿಯು ನಿ.ಪಿ-13 ರಲ್ಲಿರುವ ತನ್ನ ಹಾಗೂ ತನ್ನ ತಂದೆಯ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ-13(ಎ) ರಿಂದ ನಿ.ಪಿ-13(ಪಿ) ಎಂದು ಗುರುತಿಸಲಾಯಿತು. ದಾವಾಸ್ತಿಗಳಿಗೆ ಸಂಬಂದಪಟ್ಟ ಮೂರು ಪಹಣಿ ಪತ್ರಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ-14 ರಿಂದ ನಿ.ಪಿ-16 ಎಂದು, ಮ್ಯೂಟೇಶನ್ ರೆಜಿಸ್ಟರ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-17 ಎಂದು, ಹತ್ತು ತೆರಿಗೆ ಪಾವತಿ ರಶೀಧಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ-18 ರಿಂದ ನಿ.ಪಿ-27 ಎಂದು ಗುರುತಿಸಲಾಯಿತು.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ .**

**ಸಿವಿಲ್ ನ್ಯಾಯಾಧೀಶರು ಕಾರವಾರ**